

# ರಿತೇಶ್–ಜೆನಿಲಿಯಾ ವಿಡಿಯೊ ಮಜಾ

ಕೆಲವು ನಟ–ನಟಿಯರಿಗೆ ಸದಾ ಜನರ ಕಣ್ಣಿಗೆ ಬೀಳಬೇಕು ಎಂಬ ಬಯಕೆ ಇರುತ್ತದೆ. ಸಿನಿಮಾಗಳಲ್ಲಿ ಅಭಿನಯದ ಅವಕಾಶ ಸಿಗುವುದು ವಿರಳವಾದರೂ ಈಗ ಬೇರೆ ರಹದಾರಿಗಳಿವೆ. ಆ ಪೈಕಿ ಸಾಮಾಜಿಕ ಜಾಲತಾಣ ಮುಖ್ಯವಾದುದು. ರಿತೇಶ್ ದೇಶಮುಖ್–ಜೆನಿಲಿಯಾ ಡಿಸೋಜಾ ಜೋಡಿ ಹೀಗೆ ಸದಾ ಚಾಲ್ತಿಯಲ್ಲಿರಲು ಸಾಮಾಜಿಕ ಜಾಲತಾಣ ಆಯ್ಕೆ ಮಾಡಿಕೊಂಡಿದೆ. ಇಬ್ಬರೂ ಲವಲವಿಕೆಯಿಂದ ಅನೇಕ ಖಾಸಗಿ ಕ್ಷಣಗಳನ್ನು ಕೂಡ ಜಾಹೀರು ಮಾಡಲು ಹಿಂದೇಟು ಹಾಕುತ್ತಿಲ್ಲ.

ಮೊನ್ನೆ ಅವರಿಬ್ಬರ ಎರಡು ವಿಡಿಯೊಗಳು ವೈರಲ್ ಆದವು. ಎರಡನ್ನೂ ಒಂದೇ ಸೂತ್ರಕ್ಕೆ ಪೋಣಿಸಿ ಎಡಿಟ್ ಮಾಡಲಾಗಿತ್ತೆನ್ನುವುದು ವಿಶೇಷ. ರಿತೇಶ್ ಪಾರ್ಟಿಯೊಂದರಲ್ಲಿ ಪ್ರೀತಿ ಜಿಂಟಾ ಅವರ ಎರಡೂ ಕೈಗಳನ್ನು ಹಿಡಿದು ಏನೋ ಮಾತನಾಡುತ್ತಿರುತ್ತಾರೆ. ಆಮೇಲೆ ಪ್ರೀತಿ ಕೈಗಳಿಗೆ ಹೂಮುತ್ತನಿಡುತ್ತಾರೆ. ಅದನ್ನು ನೋಡುವ ಜೆನಿಲಿಯಾ ಕಣ್ಣಲ್ಲಿ ಅಸೂಯೆಯ ಭಾವ ಎದ್ದುಕಾಣುತ್ತದೆ. ಮುಂದಿನ ಶಾಟ್‌ನಲ್ಲಿ ಅವರು ಮನೆಯಲ್ಲಿ ರಿತೇಶ್‌ಗೆ ಪಂಚ್ ಮಾಡುತ್ತಾರೆ. ಪೆಟ್ಟು ತಿಂದ ರಿತೇಶ್ ಕುರ್ಚಿ ಮೇಲೆ ಅಸಹಾಯಕರಾಗಿ ಕೂತಿರುತ್ತಾರೆ. ‘ಕ್ಯಾ ಕಿಯಾ... ಕ್ಯಾ ಕಿಯಾ’ ಎಂಬ ಹಿನ್ನೆಲೆಯ ಹಾಡಿನ ಸಾಲು ಕೇಳಿ, ‘ತೇರಾ ನಾಮ್ ಲಿಯಾ...’ ಎಂದು ರಿತೇಶ್ ಹ್ಯಾಪುಮೋರೆ ಹಾಕಿಕೊಂಡು ಹೇಳುವುದನ್ನು ಕಂಡು, ನಟ ಟೈಗರ್ ಶ್ರಾಫ್ ಸಹ ನಗುವಿನ ಎಮೋಜಿ ಕಳುಹಿಸಿದ್ದರು.

ಇದೊಂದು ನಮೂನೆ. ಜೆನಿಲಿಯಾ ಎಡಗೈಗೆ ಪೆಟ್ಟಾಗಿದ್ದು, ಅವರು ಅದಕ್ಕೆ ಪಟ್ಟಿ ಕಟ್ಟಿಕೊಂಡಿದ್ದಾರೆ. ಹಾಗಾಗಿ ಅವರಿಗೆ ರಿತೇಶ್ ತಲೆಬಾಚಿ, ಕೂದಲು ಕಟ್ಟಿದ್ದರು. ಅದರ ವಿಡಿಯೊ ನೋಡಿಯೂ ಅಭಿಮಾನಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದರು. ‘ಮಾಸ್ಟರ್’ ತಮಿಳು ಚಿತ್ರದ ಬೀಟ್‌ಗೆ ರಿತೇಶ್ ದಂಪತಿ ಹಾಗೂ ಸ್ನೇಹಿತರು ಬಿಂದಾಸ್ ನೃತ್ಯ ಮಾಡುವುದೂ ವೈರಲ್ ಆಗಿತ್ತು. ಹಿರಿತೆರೆಯಲ್ಲಿ ಹೆಚ್ಚೇನೂ ಕೆಲಸ ಇಲ್ಲದ ಈ ಜೋಡಿ ಯೂಟ್ಯೂಬ್ ವಿಡಿಯೊಗಳ ಮೂಲಕ ಚಾಲ್ತಿಯಲ್ಲಿರುವುದು ಗಮನಾರ್ಹ. ■

# ಅಲ್ಲು ಅರ್ಜುನ್‌ಗೆ ಫಹಾದ್ ಪ್ರತಿನಾಯಕ

ಫಹಾದ್ ಫಾಸಿಲ್ ನಟನೆಗೆ ಮನಸೋತವರ ಸಂಖ್ಯೆ ದಿನೇದಿನೇ ಏರುತ್ತಿದೆ. ಮಲಯಾಳಂ ಸಿನಿಮಾಗಳಲ್ಲಿ ಸದ್ದು ಮಾಡಿರುವ ಫಹಾದ್, ಸ್ವತಃ ನಿರ್ಮಾಣ ಸಂಸ್ಥೆಯನ್ನೂ ಕಟ್ಟಿ ಬೆಳೆಸಿದವರು. ‘ಟ್ರಾನ್ಸ್’ ಹಾಗೂ ‘ಕುಂಬಳಂಗಿ ನೈಟ್ಸ್’ ಮಲಯಾಳಂ ಚಿತ್ರಗಳಲ್ಲಿನ ಅವರ ಅಭಿನಯ ಕಂಡು ಬೆರಗಾಗದವರು ವಿರಳ. ಈಗ ಅವರು ಅಲ್ಲು ಅರ್ಜುನ್ ನಾಯಕರಾಗಿ ನಟಿಸುತ್ತಿರುವ ಸಿನಿಮಾದಲ್ಲಿ ಪ್ರತಿನಾಯಕನ ಪಾತ್ರಧಾರಿಯಾಗಲಿದ್ದಾರೆ. ಇದು ತೆಲುಗು ಚಿತ್ರರಂಗಕ್ಕೆ ಫಹಾದ್ ಪ್ರವೇಶ.

ಮೊದಲು ಪ್ರತಿನಾಯಕನ ಪಾತ್ರಕ್ಕೆ ತಮಿಳು ನಟ ವಿಜಯ್ ಸೇತುಪತಿ ಅವರನ್ನು ಆಯ್ಕೆ ಮಾಡಲಾಗಿತ್ತು. ಆದರೆ, ಡೇಟ್ಸ್ ಸಮಸ್ಯೆಯಿಂದಾಗಿ ಅವರ ಜಾಗಕ್ಕೀಗ ಫಹಾದ್ ಅವರಿಗೆ ಆಹ್ವಾನವಿತ್ತಿದ್ದಾರೆ.

‘ಆರ್ಯ’ ಹಾಗೂ ‘ಆರ್ಯ 2’ ಚಿತ್ರಗಳನ್ನು ನಿರ್ದೇಶಿಸಿದ್ದ ಸುಕುಮಾರ್ ‘ಪುಷ್ಪಾ’ ತೆಲುಗು ಚಿತ್ರಕ್ಕೆ ಅಲ್ಲು ಅರ್ಜುನ್–ಫಹಾದ್ ಕಾಂಬಿನೇಷನ್ ಅನ್ನು ನಿಕ್ಕಿ ಮಾಡಿರುವುದು ಸಂಚಲನ ಮೂಡಿಸಿದೆ. ರಶ್ಮಿಕಾ ಮಂದಣ್ಣ ಚಿತ್ರದ ನಾಯಕಿ. ತೆಲುಗು ಅಲ್ಲದೆ ತಮಿಳು, ಮಲಯಾಳಂ, ಕನ್ನಡ ಮೂರೂ ಭಾಷೆಗಳಲ್ಲಿ ಈ ಚಿತ್ರ ಏಕಕಾಲಕ್ಕೆ ತೆರೆಕಾಣುವಂತೆ ನಿರ್ದೇಶಕರು ಯೋಜಿಸತೊಡಗಿದ್ದಾರೆ. ಇದೇ ಕಾರಣಕ್ಕೆ ಮಾರುಕಟ್ಟೆ ಲೆಕ್ಕಾಚಾರದಿಂದ ಆಯಾ ಪ್ರದೇಶಗಳ ನಟ–ನಟಿಯರು ತಾರಾಬಳಗದಲ್ಲಿ ಇರುವಂತೆ ನೋಡಿಕೊಂಡಿದ್ದಾರೆ. ಧನಂಜಯ್ ಹಾಗೂ ಸುನಿಲ್ ಕೂಡ ಚಿತ್ರದ ಪ್ರಮುಖ ಪಾತ್ರಗಳಿಗೆ ಬಣ್ಣ ಹಚ್ಚಲಿದ್ದಾರೆ. ಮೈತ್ರಿ ಮೂವಿ ಮೇಕರ್ಸ್ ನಿರ್ಮಾಣ ಮಾಡುತ್ತಿರುವ ಈ ಚಿತ್ರದ ಹಾಡುಗಳಿಗೆ ದೇವಿಶ್ರೀ ಪ್ರಸಾದ್ ಸ್ವರ ಸಂಯೋಜನೆ ಮಾಡಲಿದ್ದಾರೆ. ಫಹಾದ್ ಹವಾ ದಕ್ಷಿಣ ಭಾರತದ ಇತರ ಭಾಷೆಗಳಲ್ಲಿ ಹೇಗಿರುತ್ತದೋ ಎನ್ನುವ ಕುತೂಹಲ ಈಗ ಮೂಡಿದೆ.

■ ವಿಶಾಖ ಎನ್.

